ಬರಿಯ ಊಟ, ನಿದ್ರೆ! ಅದರಿಂದ ಶ್ರೇಷ್ಠ ಚಿಂತನೆ, ಉದಾತ್ತ ಭಾವನೆಗಳನ್ನು ಗ್ರಹಿಸುವ ಶಕ್ತಿ ಹೊರಟು ಹೋಗುತ್ತದೆ.' ಎಷ್ಟು ದೊಡ್ಡ ಆದರ್ಶವನ್ನಿಟ್ಟಕೊಂಡು ಇಲ್ಲಿಗೆ ಬಂದಿದ್ದೀಯಾ, ಆಲೋಚಿಸು ನೋಡೋಣ. ಹೀಗೆ ಇದ್ದುಕೊಂಡೇ ಸ್ವಾಮೀಜಿಯ ಸಂಘದ ಸೇವೆ ಮಾಡುವೆಯೆಂದು ಭಾವಿಸಿದ್ದೀಯಾ? ಧ್ಯಾನ-ಧಾರಣೆ ನಿನಗೆ ಸಾಧ್ಯವಿಲ್ಲ, ಮಣ್ಣು ಅಗೆಯಲೂ ಸಾಧ್ಯವಿಲ್ಲದಿದ್ದರೆ language (ಭಾಷೆ) ಕಲಿತುಕೋ. ದೇಶವಿದೇಶಗಳ ಭಾಷೆ, English, French, German ಇತ್ಯಾದಿ. ಅಷ್ಟು ದೂರ ಏಕೆ ಹೋಗಬೇಕು? ಸಂಸ್ಕೃತ, ಹಿಂದಿ, ಇವುಗಳನ್ನಾದರೂ ಚೆನ್ನಾಗಿ ಕಲಿ, ಅದರಿಂದಲೂ ಅನೇಕ ಕೆಲಸಗಳಾಗುತ್ತವೆ. ——ಗೆ ಹಿಂದೀ ಕಲಿಯಲು ಹೇಳಿದ್ದೆ. ಎಷ್ಟು ಚೆನ್ನಾಗಿ ಕಲಿತಿದ್ದಾನೆ! ನಿರರ್ಗಳವಾಗಿ ಮಾತನಾಡುತ್ತಾನೆ. ಯಾವುದೇ ಕೆಲಸವಾಗಲಿ, ಮಾಡು. ಇಲ್ಲದಿದ್ದರೆ ಸೋಮಾರಿಯಾಗುತ್ತೀಯಾ. ಆಗ ಏನೂ ಸಾಧ್ಯವಾಗದು. ಅದೂ ಇಲ್ಲ, ಇದೂ ಇಲ್ಲ ಎಂದಾಗುತ್ತದೆ. ನೀವು young men (ಯುವಕರು), ೯ ಗಂಟೆಯ ನಂತರ ಇನ್ನೇನೂ ಮಾಡಲಾಗುವುದಿಲ್ಲವೆಂದು ಹೇಳಲು ನಾಚಿಕೆಯಾಗುವುದಿಲ್ಲವೆ? ಮುದುಕ ಕೆಲಸ ಮಾಡಿ ಸಾಯುತ್ತಿರುವುದನ್ನು ನೀನು ಕಣ್ಣಾರೆ ನೋಡುತ್ತಿಲ್ಲವೆ? ನೋಡಿಯಾದರೂ ಸ್ವಲ್ಪ ಕಲಿತುಕೋ. ಸರಿ, ೯ ಗಂಟೆಗೆ ಮಲಗುತ್ತಿದ್ದೀಯಾ. ಬೆಳಿಗ್ಗೆ ೩ ಗಂಟೆಗೇ ಎದ್ದು ಸ್ವಲ್ಪ ಜಪಧ್ಯಾನಕ್ಕೆ ಕುಳಿತುಕೊಳ್ಳುತ್ತೀ ಎಂದಾದರೂ ಹೇಳಬಲ್ಲೆಯಾ? ನಿನಗೆ ಅದೂ ಸಾಧ್ಯವಿಲ್ಲ. ಯಥಾಪ್ರಕಾರ ೬ ಗಂಟೆಗೆ ಏಳುತ್ತೀಯಾ, ಮತ್ತೆ ಮಧ್ಯಾಹ್ನ ವಿಶ್ರಾಂತಿ –ಅಂದರೆ ೩ ಗಂಟೆ ನಿದ್ರೆ. ಇವರೆಲ್ಲ ೩ ಗಂಟೆಗೆ ನಿದ್ದೆಮಾಡಿ ಎದ್ದು ಹೇಳುತ್ತಾರೆ, 'ನಾನು ವಿಶ್ರಮಿಸುತ್ತಿದ್ದೆ!' ಅಂತ. ನಾವೆಲ್ಲ ವಿಶ್ರಾಂತಿ ಎಂದರೆ 'ಕಾರ್ಯಾಂತರ' ಎಂದು ಭಾವಿಸುತ್ತೇವೆ – ಸ್ವಲ್ಪ ಹೊತ್ತು ಮಲಗಿ, ಬಳಿಕ ಕುಳಿತು ಓದುವುದು.''

ಅದೇ ಬ್ರಹ್ಮಚಾರಿ ಒಂದು ದಿನ ಸಂಜೆ ತಲೆಗೊಂದು ಪಗಡಿ ಸುತ್ತಿಕೊಂಡು ಕೈಯಲ್ಲಿ ದಂಡ, ಕಮಂಡಲುವನ್ನು ಹಿಡಿದುಕೊಂಡು ಬಾಬಾ ಹತ್ತಿರ ಎರಡು ಬಾರಿ ಹಾದುಹೋದ. ಬಾಬಾ ಜಗಲಿಯಲ್ಲಿ ಕ್ಯಾಂಪ್‌ಕಾಟ್‌ನ ಮೇಲೆ ಕುಳಿತ್ತಿದ್ದಾರೆ. ಬ್ರಹ್ಮಚಾರಿಯನ್ನು ನೋಡಿ ಹೇಳಿದರು: ''ಏನು? ಏನು ಆಲೋಚಿಸುತ್ತಿದ್ದೀಯಾ? ದಂಡ, ಕಮಂಡಲುಗಳೇಕೆ? ನನಗೆ ಅರ್ಥವಾಯಿತು, ಅದನ್ನು ಬಾಯಿ ಬಿಟ್ಟು ಹೇಳಲಾಗದೆ? ನನಗೆ ಇದೆಲ್ಲ ಇಷ್ಟವಾಗುವುದಿಲ್ಲ. ಕರ್ಮಿಗೆ ಕಾವಿವಸ್ತ್ರ ಏಕೆ? ಬಿಳಿಯ ಬಟ್ಟೆ ಧರಿಸಿಕೊಂಡೇ ಯಾವುದಾದರೂ ಆಶ್ರಮದಲ್ಲಿ ಕೆಲಸ ಮಾಡುತ್ತಿರು. ತ್ಯಾಗ-ತಪಸ್ಸುಗಳನ್ನೂ ಮಾಡು. ಸಂನ್ಯಾಸಿಯಾಗುವುದು ಕೊನೆಗೆ. ಆಗ ಅದು ಇನ್ನೊಂದು ರೀತಿ. ಸಂನ್ಯಾಸಿ ಕಾಷಾಯ ಧರಿಸುತ್ತಾನೆ, ಭಿಕ್ಷಾವ್ರತ ಪಾಲಿಸಿ ಸಾಧನೆ ಮಾಡುತ್ತಾನೆ, ಪರಿವ್ರಾಜಕನಾಗುವನು. ನಿನಗದು ಸಾಧ್ಯವೆ?''

ಸಂಜೆಯ ಆರತಿಗೆ ಮುನ್ನ ಬಾಬಾ ಕೋಣೆಯ ಹೊರಗಿನ ಹಾಲ್‌ನಲ್ಲಿ, ಕುರ್ಚಿಯಲ್ಲಿ ಒಬ್ಬರೇ ಮೌನವಾಗಿ ಕುಳಿತಿದ್ದಾರೆ. ಹತ್ತಿರ ಯಾರೂ ಇಲ್ಲ. ಭಕ್ತ ಅವರ ಬಳಿ ಹೋದ. ಅವನಿಗೆ ಅವರು ಹೇಳಿದರು, ''ಎಲ್ಲಿ, ಸ್ವಲ್ಪ ಬೀಸಣಿಗೆ ತಾ ನೋಡೋಣ.''

ಭಕ್ತನು ನಿಧಾನವಾಗಿ ಅವರ ದೇಹಕ್ಕೆ ಗಾಳಿ ಬೀಸುತ್ತಿದ್ದಾನೆ. ಆಗ, ''ಸೆಕೆಗಾಗಿ ಅಲ್ಲ. ಕಾಲಿನ ಮೇಲೆ ದೊಡ್ಡ ಸೊಳ್ಳೆ ಕುಳಿತಿದೆ'' ಎಂದರು. ಭಕ್ತ ಆ ಪವಿತ್ರ ಸಂಜೆಯಲ್ಲಿ ಮೌನವಾಗಿ ನಿಧಾನವಾಗಿ ಅವರ ಕಾಲುಗಳಿಗೆ ಗಾಳಿ ಬೀಸತೊಡಗಿದ.

*(ಮುಂದುವರಿಯುವುದು)*

## ಪಕ್ಷಿಗಳಲ್ಲೂ ಮಾನವೀಯ ಸಂವೇದನೆಗಳು

**ಆ** ದಿನಗಳಲ್ಲಿ ನಾನು ನನ್ನ ಹಳೆಯ ಮನೆಯ ತಾರಸಿಯ ಮೂಲೆಯಲ್ಲಿ ಪಾರಿವಾಳಗಳಿಗೆ ಪ್ರತಿದಿನ ಧಾನ್ಯವನ್ನು ಹಾಕುತ್ತಿದ್ದೆ. ಒಂದು ದಿನ ನಾನು ತುರ್ತು ಕಾರ್ಯಕ್ಕಾಗಿ ಒಬ್ಬರನ್ನು ಭೇಟಿಯಾಗಲು ಹೋಗಬೇಕಾಗಿತ್ತು. ಆದ್ದರಿಂದ ನಾನು ಹಕ್ಕಿಗಳಿಗೆ ಧಾನ್ಯವನ್ನು ಹಾಕುವಂತೆ ಪತ್ನಿಗೆ ಹೇಳಿ ಹೋದೆ. ನಾನು ಮರಳಿ ಬರಲು ಒಂದು ಗಂಟೆ ತಡವಾಯಿತು. ಬಂದು ನೋಡಿದರೆ ಪಾರಿವಾಳಗಳು ಛತ್ತಿನ ಮೇಲೆ ಕಣ್ಣು ಮುಚ್ಚಿಕೊಂಡು ಕುಳಿತಿದ್ದವು. ಪ್ರತಿದಿನ ಅವು ಧಾನ್ಯಗಳನ್ನು ತಿಂದು ಹಾರಿ ಹೋಗುತ್ತಿದ್ದವು. ನಾನು ಪತ್ನಿಗೆ ಕೇಳಿದೆ – ಅವಳು ಮಕ್ಕಳಿಗೆ ಶಾಲೆಗೆ ಕಳುಹಿಸುವ ಅವಸರದಲ್ಲಿ ಧಾನ್ಯ ಹಾಕಲು ಮರೆತಿದ್ದಳು ಎಂದು ಗೊತ್ತಾಯಿತು. ಅದನ್ನು ಕೇಳಿ ನನಗೆ ಕೋಪ ಬಂತು. ಕೂಡಲೇ ನಾನು ಒಂದು ಲೋಟದ ತುಂಬ ಧಾನ್ಯವನ್ನು ತೆಗೆದುಕೊಂಡು ಹೋಗಿ, ಅವುಗಳ ಮುಂದೆ ಎಸೆದೆ. ಮತ್ತೆ ಯಾವುದೋ ಕೆಲಸಕ್ಕಾಗಿ ನಾನು ಹೊರಗೆ ಹೋಗಬೇಕಾಗಿತ್ತು. ಮರಳಿ ಬಂದು ನೋಡಿದರೆ, ಧಾನ್ಯ ಹಾಗೇ ತಾರಸಿಯ ನೆಲದ ಮೇಲೆ ಬಿದ್ದಿದ್ದವು, ಪಾರಿವಾಳಗಳೂ ಹಾಗೆಯೇ ಕಣ್ಣುಮುಚ್ಚಿ ಮೌನವಾಗಿ ಕುಳಿತುಕೊಂಡಿದ್ದವು. ನನಗೆ ನಾನು ಮಾಡಿದ ತಪ್ಪಿನ ಅರಿವಾಯಿತು. ನಾನು ಕೋಪದ ಭರದಲ್ಲಿ ಅವಜ್ಞೆಯಿಂದ ಧಾನ್ಯವನ್ನು ಎಸೆದಿದ್ದೆ. ನಾನು ಬಾಗಿ ಪ್ರೀತಿಯಿಂದ, ಆಹಾರವನ್ನು ಸ್ವೀಕರಿಸು ಎಂದು ಹೇಳುತ್ತ ಅವಕ್ಕೆ ಕೊಟ್ಟಿರಲಿಲ್ಲ. ಈಗ ನಾನು ಮನಃಪೂರ್ವಕವಾಗಿ ಅವಕ್ಕೆ ಧಾನ್ಯವನ್ನು ತಿನ್ನುವಂತೆ ಕೇಳಿಕೊಂಡೆ. ಅಷ್ಟೇ ಅಲ್ಲ, ಅವು ತಿನ್ನದಿದ್ದರೆ ನಾನೂ ಉಪವಾಸ ಮಾಡುತ್ತೇನೆ ಎಂದು ಹೇಳಿದೆ. ಮರುಕ್ಷಣದಲ್ಲಿ ಎಲ್ಲ ಪಾರಿವಾಳಗಳೂ ಹಾರಿ ಬಂದು ಧಾನ್ಯವನ್ನು ತಿಂದವು.

ಯಾರಿಗೆ ಗೊತ್ತು, ಯಾವ ಜೀವಾತ್ಮಗಳು ಈ ಹಕ್ಕಿಗಳ ರೂಪದಲ್ಲಿ ನಮ್ಮ ಬಳಿಸಾರಿ ತಮ್ಮ ಬಾಕಿಯನ್ನು ತೀರಿಸಿಕೊಳ್ಳುತ್ತಿವೆಯೊ! ನಾವು ಅವುಗಳೊಂದಿಗೆ ವಿನಯ, ಆತ್ಮೀಯತೆ ಹಾಗೂ ಸದ್ವರ್ತನೆಗಳಿಂದ ನಡೆದುಕೊಳ್ಳಬೇಕು. ಅವು ನಮ್ಮ ಮನಗೇ ಬಂದು, ನಮಗೆ ಪುಣ್ಯವನ್ನು ಸಂಪಾದಿಸಲು ಒಂದು ಅವಕಾಶವನ್ನು ಕೊಡುತ್ತಿವೆ ಎಂದರಿತು ಅವುಗಳಿಗೆ ನಾವು ಕೃತಜ್ಞರಾಗಿರಬೇಕು.

– **ಗೋಪಾಲಕೃಷ್ಣ ಜಿಂದಲ್**, 'ಕಲ್ಯಾಣ' ಜುಲೈ ೨೦೧೪ *(ಕೃಪೆ: 'ಕಲ್ಯಾಣ' ಮಾಸಪತ್ರಿಕೆ; ಸಂಗ್ರಹ: ಮಾತಾ ತ್ಯಾಗಮಯೀ)*

# ಪರಿಹಾರ ಕಾರ್ಯದ ಕೆಲವು ನೆನಪುಗಳು

◆ ಒಬ್ಬ ಅನಾಮಿಕ ಸಂನ್ಯಾಸಿ

ರಾಮಕೃಷ್ಣ ಮಹಾಸಂಘದಲ್ಲಿ ನಡೆಯುವ 'ಪರಿಹಾರ ಕಾರ್ಯ'ಗಳ ಹಿಂದಿರುವ ಉದಾತ್ತ ಧ್ಯೇಯ, ತ್ಯಾಗ-ಸೇವೆಯ ಆದರ್ಶವನ್ನು ಪ್ರಾಯೋಗಿಕ ಕಾರ್ಯಕ್ಷೇತ್ರದಲ್ಲಿ ಕಾಣುವ ಲೇಖಕರು ಸಂಘದ ಹಿರಿಯ ಸಂನ್ಯಾಸಿಗಳು.



ಅದು ೧೯೭೩ರ ಫೆಬ್ರವರಿ ತಿಂಗಳು. ಸ್ವಾಮಿ ಅಚಲಾನಂದರು ಕೇಳಿದರು, ''ನನ್ನ ಜೊತೆಯಲ್ಲಿ ಬರಗಾಲ ಪರಿಹಾರ ಕಾರ್ಯಕ್ಕೆ ಬರುತ್ತೀರಾ? ಸ್ವಾಮಿ ಆದಿದೇವಾನಂದರು ನನ್ನ ಜೊತೆ ಕಳಿಸಲು ಯಾರೂ ಇಲ್ಲವೆಂದು ಹೇಳಿದರು.'' ಅವರ ಮಾತು ಕೇಳಿ ತುಂಬಾ ಸಂತೋಷವಾಯಿತು. ಸ್ವಾಮಿ ವಿವೇಕಾನಂದರು ಆದೇಶಿಸಿರುವ 'ಜೀವರಲ್ಲಿ ಶಿವನ ಸೇವೆ' ಮಾಡಲು ಅವಕಾಶ ಸಿಗುತ್ತದೆ ಮತ್ತು ನನ್ನಿಂದ ಅದು ಎಷ್ಟರ ಮಟ್ಟಿಗೆ ಸಾಧ್ಯವಾಗಬಹುದು ನೋಡೋಣ ಎಂಬ ಉತ್ಸಾಹ. ''ಸಂತೋಷವಾಗಿ ಬರುತ್ತೇನೆ'' ಎಂದೆ. ''ಆದರೆ ನೀವು ಬೇಲೂರು ಮಠಕ್ಕೆ ಹೋಗುವುದು?'' (ನಾನು ಎರಡು ವರ್ಷಗಳ ಬ್ರಹ್ಮಚಾರಿ ತರಬೇತಿ ಕೇಂದ್ರಕ್ಕೆ ಹೋಗಬೇಕಾಗಿತ್ತು.) ನಾನೆಂದೆ, ''ಅದಕ್ಕೇನು, ಮುಂದಿನ ವರ್ಷ ಹೋದರಾಯಿತು.'' ''ಹಾಗಾದರೆ ನಾನು ಆದಿದೇವಾನಂದರಿಗೆ ತಿಳಿಸುತ್ತೇನೆ.''

ಸುಮಾರು ಎರಡು ಮೂರು ವರ್ಷ ಸರಿಯಾಗಿ ಮಳೆ ಬಾರದ ಕಾರಣ ಉತ್ತರ ಕರ್ನಾಟಕ ಬರಪೀಡಿತವಾಗಿತ್ತು. ಬಡವರ ಮತ್ತು ದನಕರುಗಳ ಪರಿಸ್ಥಿತಿ ಚಿಂತಾಜನಕವಾಗಿತ್ತು. ಪರಿಹಾರ ಕಾರ್ಯ ಕೈಗೊಳ್ಳಬೇಕೆಂದು ಭಕ್ತರ ಆಗ್ರಹ. ಸ್ವಾಮಿ ಆದಿದೇವಾನಂದರು ಬೇಲೂರು ಮಠಕ್ಕೆ, ಅನುಮತಿ, ಹಣ, ಜನ ಕೇಳಿ ಕಾಗದ ಬರೆದಿದ್ದರು. ಜನ, ಹಣ ಕೊಡಲಾಗುವುದಿಲ್ಲವೆಂದೂ, ಪರಿಹಾರ ಕಾರ್ಯ ಮಾಡಬೇಕೆಂದೂ ಬೇಲೂರು ಮಠದಿಂದ ಕಾಗದ ಬಂತು.

ಸ್ವಾಮಿ ಅಚಲಾನಂದರಿಗೆ ಇಂತಹ ಕೆಲಸಗಳೆಂದರೆ ತುಂಬ ಉತ್ಸಾಹ. ಜೊತೆಗೆ ನನ್ನನ್ನು ಕರೆದಾಯಿತು. ಹಣ! ಆಗ ಬೆಂಗಳೂರು ಶ್ರಮದಲ್ಲಿ ಇದಕ್ಕೆಲ್ಲ ಹಣವಿರಲಿಲ್ಲ. ಆಶ್ರಮಕ್ಕೆ ಬರುತ್ತಿದ್ದ ಕೆಲವು ಭಕ್ತರು, ಅದರಲ್ಲೂ ಆಶ್ರಮದ ಹತ್ತಿರದಲ್ಲೇ ಇದ್ದ ಗಂಜಾಂ ಹೌಸ್‌ನ ಕು.ಉಮಾ ಮತ್ತು ಸಂಗಡಿಗರು ಸುಮಾರು ೬೪,೦೦೦ ರೂ. ಸಂಗ್ರಹಿಸಿದರು. ಆ ಕಾಲಕ್ಕೆ ಅದು ಸಾಕಷ್ಟು ದೊಡ್ಡ ಮೊತ್ತ ಎಂದೇ ಹೇಳಬಹುದು.

ಪರಿಹಾರ ಕಾರ್ಯದ ಮೊದಲನೆಯ ಹಂತ – ಎಲ್ಲಿ ಪರಿಹಾರದ ಆವಶ್ಯಕತೆ ಇದೆ, ವಿತರಣೆ ಕೆಲಸ ಎಲ್ಲಿ ನಡೆಯಬೇಕು, ಕಾರ್ಯನಿರ್ವಾಹಕರು ಎಲ್ಲಿರಬೇಕು, ಇತ್ಯಾದಿ ಯೋಜನೆ. ಸ್ವಾಮಿ ಅಚಲಾನಂದರು ಆಶ್ರಮದ ಎಲ್ಲಾ ಕೆಲಸಗಳನ್ನು ಮಾಡಿ ಮುಗಿಸಿ, ಒಂದು ಯೋಜನೆಯನ್ನು ತಯಾರಿಸಿ, ಅದಕ್ಕೆ ಸ್ವಾಮಿ ಆದಿದೇವಾನಂದರ ಒಪ್ಪಿಗೆಯನ್ನು ಪಡೆದರು. ಶ್ರೀರಾಮಕೃಷ್ಣ ಜಯಂತಿಯ ದಿನ ಸಾಯಂಕಾಲ ನಮ್ಮ ತಂಡ – ಸ್ವಾಮಿ ಅಚಲಾನಂದರು, ನಾನು, ಸ್ವಯಂಸೇವಕರಲ್ಲಿ ಕೆಲವರು ಮತ್ತು ಸ್ಟೀವರ್ಡ್ ಎಂಬ ಕೆನಡಾ ದೇಶವಾಸಿ, ಅಲಸೂರಿನ ಆಶ್ರಮಕ್ಕೆ ಹೋಗಿ, ಮುಂದಿನ ರಾತ್ರಿ ಬಸ್‌ನಲ್ಲಿ ಗುಲ್ಬರ್ಗಾ ತಲುಪಿದೆವು. ಸ್ವಾಮಿ ಅಚಲಾನಂದರ ಹಿಂದಿನ ಪ್ರಭಾವದಿಂದಾಗಿ ಪಿ.ಡಬ್ಲ್ಯು.ಡಿ.ಯ ವಿಶ್ರಾಂತಿಗೃಹದಲ್ಲಿ ಉಳಿದುಕೊಂಡೆವು. ನಾವು ಯಾರು ಹೋದರೂ ಪರಿಹಾರ ಕಾರ್ಯ ಮುಗಿಯುವವರೆಗೂ ಅಲ್ಲೇ ಇರಲು ಜಾಗ ಕೊಡುತ್ತಿದ್ದರು.

ಅಲ್ಲಿ ಅತಿ ಮುಖ್ಯವಾದ ಕೆಲಸ – ಗುಲ್ಬರ್ಗಾದಲ್ಲಿರುವ ಕೆನರಾ ಬ್ಯಾಂಕಿನಲ್ಲಿ, 'ರಾಮಕೃಷ್ಣ ಆಶ್ರಮ, ಬೆಂಗಳೂರು' ಈ ಹೆಸರಿನಲ್ಲಿ ಒಂದು ಜಾಯಿಂಟ್ ಅಕೌಂಟ್ (ಸ್ವಾಮಿ ಅಚಲಾನಂದರ ಮತ್ತು ನನ್ನ ಹೆಸರಿನಲ್ಲಿ) ತೆಗೆದು, ತಂದಿದ್ದ ಹಣವನ್ನೆಲ್ಲ ಅದರಲ್ಲಿ ಜಮಾ ಮಾಡಿ, ರಾತ್ರಿ ರೈಲಿನಲ್ಲಿ ರೇಲ್ ಗಾಣಗಾಪುರಕ್ಕೆ ಹೊರಟೆವು. ಅಲ್ಲಿಂದ ದೇವಲ್ ಗಾಣಗಾಪುರಕ್ಕೆ ಹೋಗಿ, ಅಲ್ಲಿಯ ಧರ್ಮಶಾಲೆಯಲ್ಲಿ ಇಳಿದುಕೊಂಡೆವು. ಮುಂದಿನ ಸುಮಾರು ಆರು ತಿಂಗಳು ಅದೇ ನಮಗೆ ಬರಗಾಲ ಪರಿಹಾರ ಕೇಂದ್ರದ ವಾಸಸ್ಥಾನ. ಉಗ್ರಾಣ, ಅಡಿಗೆ ಮನೆ, ಮಲಗುವ ಸ್ಥಳ, ಕೆಳಗಡೆ ಎರಡು ದೊಡ್ಡ ಕೊಠಡಿ, ಮೇಲ್ಗಡೆ ಮಹಡಿಯಲ್ಲಿ ಎರಡು ಕೊಠಡಿ ಇದ್ದವು. ಸುಮಾರು ಒಂದು ತಿಂಗಳ ನಂತರ ಸ್ನಾನದ ಮನೆಯ ವ್ಯವಸ್ಥೆ ಮಾಡಿದರು. ಯಾರಾದರೂ ಅಡಿಗೆಯವರಿದ್ದರೆ ಅಡಿಗೆ ಮಾಡುತ್ತಿದ್ದರು. ಇಲ್ಲದಿದ್ದರೆ ನಾವುಗಳೇ ಎಲ್ಲರೂ ಹಂಚಿಕೊಂಡು ಅಡಿಗೆ, ತಿಂಡಿ ಇತ್ಯಾದಿ ಮಾಡುತ್ತಿದ್ದೆವು. ನಂತರ ಧಾನ್ಯ ವಿತರಣೆಗೆ ಹಳ್ಳಿಗಳಿಗೆ ಹೋಗಿ ಬಡವರು, ಮುದುಕರು, ಹೆಂಗಸರು, ನಿರಾಶ್ರಿತರು – ಇವರನ್ನು ವಿಚಾರಿಸಿ, ಅವರಿಗೆ ಕಾರ್ಡ್ ಕೊಟ್ಟು, ನಿಗದಿತ ದಿನದಂದು ವಿತರಣಾಕೇಂದ್ರಕ್ಕೆ ಬಂದು ಧಾನ್ಯ ತೆಗೆದುಕೊಂಡು ಹೋಗಲು ಹೇಳಿ ಬರುತ್ತಿದ್ದೆವು. ಶೇ.೯೦ ಭಾಗ ನಡೆದೇ ಹೋಗುತ್ತಿದ್ದೆವು. ಬಸ್ಸಿನ ವ್ಯವಸ್ಥೆಯಿರುವೆಡೆ ಸಾಧ್ಯವಾದಷ್ಟು ದೂರ ಹೋಗಿ ಅಲ್ಲಿಂದ ನಡೆದುಹೋಗಿ ಕೆಲಸ ಮುಗಿಸುತ್ತಿದ್ದೆವು. ನಮ್ಮಲ್ಲಿ ವಾಹನ ಸೌಕರ್ಯವಿರಲಿಲ್ಲ ಮತ್ತು ನಮ್ಮಲ್ಲಿದ್ದ ಹಣವನ್ನು ಅದಕ್ಕೆಲ್ಲ ಖರ್ಚು ಮಾಡುವಂತಿರಲಿಲ್ಲ.

ಮೊದಲ ಹಂತದಲ್ಲಿ ಗಾಣಗಾಪುರದಿಂದ ಐದು ಕಿ.ಮೀ. ಸುತ್ತಲೂ ಇದ್ದ ಹಳ್ಳಿಗಳಿಗೆ ಧಾನ್ಯ ವಿತರಣೆ ವ್ಯವಸ್ಥೆ ಮಾಡಲಾಯಿತು. ಅವರೆಲ್ಲರೂ ೧೫ ದಿನಗಳಿಗೊಮ್ಮೆ ಬಂದು ಅವರ ಪಾಲಿನ ಧಾನ್ಯ ತೆಗೆದು ಕೊಂಡು ಹೋಗುತ್ತಿದ್ದರು.

ಎರಡನೇ ಹಂತದಲ್ಲಿ ಹತ್ತು ಕಿ.ಮೀ. ದೂರದವರೆಗಿನ ಹಳ್ಳಿಗಳಲ್ಲಿ ವಿಚಾರಿಸಿ, ಕಾರ್ಡ್ ಹಂಚಿ, ಬರಗಾಲ ಪರಿಹಾರ ಕೇಂದ್ರ, ಗಾಣಗಾಪುರಕ್ಕೆ ೧೫ ದಿನಗಳಿಗೊಮ್ಮೆ ಬಂದು ಅವರ ಪಾಲಿನ ಧಾನ್ಯ ತೆಗೆದುಕೊಂಡು ಹೋಗಲು ಹೇಳಿಬರುತ್ತಿದ್ದೆವು. ನಮ್ಮಲ್ಲಿ ವಾಹನ ಸೌಕರ್ಯವಿಲ್ಲದ್ದರಿಂದ ಈ ವ್ಯವಸ್ಥೆ ಮಾಡಬೇಕಾಯಿತು.

ಎರಡನೇ ಹಂತದಲ್ಲಿ ೬ ರಿಂದ ೧೦ ಕಿ.ಮೀ ದೂರ ನಡೆದು ಧಾನ್ಯ ತೆಗೆದುಕೊಂಡು ಹೋಗುತ್ತಿದ್ದರು. ಈಗ ನಮಗೆ ಮತ್ತೊಂದು ಸಮಸ್ಯೆ ಬಂತು. ಜನರು ಶೇ.೯೦ ಭಾಗ ನಡೆದು ಬಂದು, ನಡೆದೇ ಹಿಂತಿರುಗುತ್ತಿದ್ದರು. ಇದು ತುಂಬ ಪ್ರಯಾಸಕರವಾದ್ದರಿಂದ, ಸುಮಾರು ೬೦ ಜನ ಹಿಂದಿನ ರಾತ್ರಿಯೇ ಬಂದು, ಅಲ್ಲೇ ಎಲ್ಲಾದರೂ ಜಗಲಿಯಲ್ಲೋ, ವರಾಂಡದಲ್ಲೋ ಮಲಗಿದ್ದು, ಬೆಳಗ್ಗೆ ಎಂಟು ಗಂಟೆಯ ನಂತರ ಅವರ ಪಾಲಿನ ಧಾನ್ಯ ಹೊತ್ತು, ಖಾಲಿ ಹೊಟ್ಟೆಯಲ್ಲೇ ನಡೆದು ಹೋಗುತ್ತಿದ್ದರು. ಇವರಿಗೆಲ್ಲ ಬೆಳಗ್ಗೆ ೧೦ ಗಂಟೆಗೆ ಊಟದ ವ್ಯವಸ್ಥೆ – ಜೋಳದ ರೊಟ್ಟಿ, ಪಲ್ಯ – ಮಾಡಲಾಯಿತು. ಇದನ್ನು ನೋಡಿ ತುಂಬ ಸಂತೋಷಪಟ್ಟರು. ನಾವು ಕೂಡ ಅಂದು ಮಧ್ಯಾಹ್ನ ಅದೇ ಊಟ ಮಾಡುತ್ತಿದ್ದೆವು – ಜೋಳದ ರೊಟ್ಟಿ, ಪಲ್ಯ.

ನಮ್ಮ ಶಿಬಿರ ಹೀಗೆ ಆರಂಭವಾಗಿ, ಸುಮಾರು ಒಂದೂವರೆ ತಿಂಗಳಲ್ಲಿ ಪರಿಹಾರಕಾರ್ಯ ಬಿರುಸಿನಿಂದ ನಡೆಯಲಾರಂಭಿಸಿತು. ಸ್ವಾಮಿ ಸೋಮನಾಥಾನಂದರು, ಇಬ್ಬರು ಬ್ರಹ್ಮಚಾರಿಗಳನ್ನು ಕಳಿಸಿದರು. ವಿವೇಕಾನಂದ ಬಾಲಕ ಸಂಘ (ಬೆಂಗಳೂರು ರಾಮಕೃಷ್ಣ ಆಶ್ರಮ) ದಲ್ಲಿದ್ದ ಇಬ್ಬರು ಸ್ವಯಂಸೇವಕ ಯುವಕರು ಬಂದು ಸೇರಿದರು. ಹೀಗಾಗಿ ನಮ್ಮ ಶಿಬಿರದಲ್ಲಿ ಸ್ವಾಮಿ ಅಚಲಾನಂದರ ಜೊತೆಗೆ ಮೂವರು ಬ್ರಹ್ಮಚಾರಿಗಳು, ಮೂವರು ಸ್ವಯಂಸೇವಕರು ಮತ್ತು ಏಳು ಜನ. ಕೆನೆಡಿಯನ್ ಮಿತ್ರರು, 'ಗೊಂದಲ ಜಾಸ್ತಿ, ಸಾಧನೆಗೆ ಅಡಚಣೆ' ಯೆಂದು ಹೇಳಿ ಹೊರಟುಹೋದರು.

ಸುಮಾರು ಒಂದೂವರೆ ಎರಡು ತಿಂಗಳ ನಂತರ, ಬರಗಾಲ ಪರಿಹಾರದ ಮತ್ತೊಂದು ಶಾಖೆ ನಾವಿದ್ದ ದೇವಲ್ ಗಾಣಗಾಪುರದಿಂದ ಸುಮಾರು ೧೫ ಕಿ.ಮೀ. ದೂರ ಕರಜಗಿ ಎಂಬಲ್ಲಿ ಆರಂಭವಾಯಿತು. ಇಲ್ಲಿ ಗ್ರಾಮದವರೊಬ್ಬರು ತಮ್ಮ ಮನೆಯಲ್ಲಿ ಒಂದು ಕೊಠಡಿಯನ್ನು ನಮ್ಮ ಧಾನ್ಯದ ಗೋದಾಮಿಗೆ ಹಾಗೂ ವಿತರಣೆಗೋಸ್ಕರ ಕೊಟ್ಟಿದ್ದರು. ಈ ಹಳ್ಳಿ ಇದ್ದದ್ದು ಮಹಾರಾಷ್ಟ್ರದ ಅಕ್ಕಲಕೋಟೆಯ ಹತ್ತಿರ. ಗಾಣಗಾಪುರಕ್ಕೆ ಬಸ್ಸಿನ ಸೌಕರ್ಯವಿದ್ದುದರಿಂದ ನಾವು ಅಲ್ಲಿ ಇರುತ್ತಿರಲಿಲ್ಲ. ಬೆಳಿಗ್ಗೆ ಸುಮಾರು ೬-೭ ಗಂಟೆಗೆ ಹೊರಟು ಸಂಜೆ ಸುಮಾರು ೭ ಕ್ಕೆ ಹಿಂದಿರುಗುತ್ತಿದ್ದೆವು.

ಎರಡನೇ ಶಿಬಿರಕ್ಕೆ ಸ್ವಾಮಿ ಅಚಲಾನಂದರು ಒಂದು ಯೋಜನೆ ತಯಾರಿಸಿದರು. ಅದರ ಪ್ರಕಾರ ನಾವು ಬ್ರಹ್ಮಚಾರಿಗಳು, ಸ್ವಯಂಸೇವಕರೊಡನೆ ಸರ್ವೆ ಕೆಲಸ ಮಾಡಿ, ಧಾನ್ಯ ವಿತರಣೆಗೆ ಕಾರ್ಡ್ ಹಂಚಿ ಬಂದೆವು. ಇಲ್ಲಿ ಕೂಡಾ ೫ ರಿಂದ ೧೦. ಕಿ.ಮೀ.ವರೆಗಿನ ಹಳ್ಳಿಗಳಲ್ಲಿ ಕಾರ್ಡ್ ಕೊಟ್ಟೆವು. ೧೫ ದಿನಕೊಮ್ಮೆ ಧಾನ್ಯ ವಿತರಣೆಯಾಗುತ್ತಿತ್ತು.

ಸುಮಾರು ಒಂದೂವರೆ ತಿಂಗಳ ನಂತರ ಬೆಂಗಳೂರು ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ ಎರಡು ಕೇಂದ್ರಗಳಲ್ಲಿ ಧಾನ್ಯ ವಿತರಣೆಯ ಕಾರ್ಯ ಬಿರುಸಾಗಿಯೇ ನಡೆಯಿತು. ಸುಮಾರು ಎರಡು ಸಾವಿರ ಜನರಿಗೆ ಪರಿಹಾರ ಕೊಡಲಾಗುತ್ತಿತ್ತು. ಅಷ್ಟು ಸ್ವಲ್ಪ ಹಣದಿಂದ ಈ ಕೆಲಸ ಹೇಗೆ ಸಾಧ್ಯವಾಯಿತೆಂದು ಈಗ ಊಹಿಸಲೂ ಕಷ್ಟವಾಗಬಹುದು. ವಿತರಣೆಗೆ ಬೇಕಾದ ಗೋಧಿಯನ್ನು ಹಣ ಕಟ್ಟಿ ಸರ್ಕಾರಿ ಉಗ್ರಾಣದಿಂದ ಕೊಳ್ಳುತ್ತಿದ್ದೆವು. ಆಗ ೧ ಕಿಲೋಗೆ ೭೫-೮೦ ಪೈಸೆ. ನಾವು ಖರ್ಚು ಮಾಡಿದ ಹಣವನ್ನು ಸರ್ಕಾರ ಹಿಂತಿರುಗಿ ಕೊಡುತ್ತಿತ್ತು. ಇದು ಸ್ವಾಮಿ ಅಚಲಾನಂದರ ವ್ಯವಸ್ಥೆ.

ಇದರಲ್ಲಿ ನಮಗೆ ಇನ್ನೊಂದು ಅನುಭವವಾಯಿತು. ಸರ್ಕಾರಿ ನಿಯಮ ಪಾಲಿಸಿದರೆ ಅವರು ಹಣ ಹಿಂತಿರುಗಿಸುವರು. ಆದರೆ ಅದರಿಂದ ಜನರ ಹೊಟ್ಟೆ ತುಂಬುವುದಿಲ್ಲ. ನಾನು ಮತ್ತು ಸ್ವಾಮಿ ಅಚಲಾನಂದರು ಯೋಚಿಸಿ, ಆಶ್ರಮದ ಕಡೆಯಿಂದ ಒಂದು ಕಿಲೋ ಜೋಳವನ್ನು ಅಧಿಕವಾಗಿ ಪ್ರತಿ ಕಾರ್ಡಿಗೂ ಕೊಡುತ್ತಿದ್ದೆವು.

ಪ್ರತಿ ವಿತರಣೆಯ ದಿನ, ಕೆಲಸ ಮಾಡುವ ಮುಂಚೆ ಒಂದು ಸ್ಟೂಲ್ ಮೇಲೆ ಶ್ರೀರಾಮಕೃಷ್ಣರ ಚಿತ್ರಪಟವನ್ನಿಟ್ಟು , ಅಗರಬತ್ತಿ ಹಚ್ಚಿ , ವೇದಪಠಣ ಮಾಡಿ ನಂತರ ಪ್ರಾರಂಭಿಸುತ್ತಿದ್ದೆವು. ನಾರಾಯಣ ಸೇವೆ ಅಷ್ಟು ಸುಲಭವೇನಾಗಿರಲಿಲ್ಲ. ಹಳ್ಳಿಯವರನ್ನು ಶಿಸ್ತಿನಿಂದ ನಿಲ್ಲಿಸಿ, ಒಬ್ಬರಾದಮೇಲೆ ಮತ್ತೊಬ್ಬರು ಆಹಾರವಸ್ತು ತೆಗೆದುಕೊಂಡು ಹೋಗುವಂತೆ ಕಲಿಸುವುದು ಕಷ್ಟವೇ ಆಗುತ್ತಿತ್ತು. ಸಾಲಿನಲ್ಲಿರುವ ಎಲ್ಲರಿಗೂ ಕಾರ್ಡ್ ಇದ್ದರೆ ಧಾನ್ಯ ಸಿಗುವುದೆಂದು ಭರವಸೆಯಾದ ಮೇಲೆ ಕೆಲಸ ಸುಲಭವಾಯಿತು. ಹಣದ ಆಕರ್ಷಣೆ ಮತ್ತು ಮೋಹ ಎಷ್ಟಿರುತ್ತಿದ್ದಿತೆಂದರೆ ತಾವು ಉಪವಾಸವಿದ್ದರೂ ತಮ್ಮ ಕಾರ್ಡನ್ನು ಬೇರೆಯವರಿಗೆ ಕೊಡುತ್ತಿದ್ದರು. ಇದೆಲ್ಲ ನಮಗೆ ಹೇಗೋ ತಿಳಿಯುತ್ತಿತ್ತು. ಅದಕ್ಕೆ ಸೂಕ್ತ ಪರಿಹಾರ ಮಾಡಬೇಕಾಗುತ್ತಿತ್ತು.

**ಬರಗಾಲ ಪರಿಹಾರ ಕೇಂದ್ರದಲ್ಲಿ ದಿನಚರಿ:** ನಾವೆಲ್ಲ ಸುಮಾರು ನಾಲ್ಕೂವರೆ ಐದು ಗಂಟೆಗೆ ಎದ್ದು, ಪ್ರಾತಃಕೃತ್ಯಗಳನ್ನು ಮುಗಿಸಿ, ಮಲಗುವ ಕೋಣೆಯಲ್ಲಿಟ್ಟಿದ್ದ ಶ್ರೀರಾಮಕೃಷ್ಣ, ಶ್ರೀಮಾತೆ ಮತ್ತು ಸ್ವಾಮೀಜಿಯವರ ಚಿತ್ರಪಟಗಳ ಮುಂದೆ ಅಗರಬತ್ತಿ ಹಚ್ಚಿ, ಸ್ವಾಮಿ ಅಚಲಾನಂದರು ಬರೆದ **'ಶ್ರೀರಾಮಕೃಷ್ಣ ಮಂಗಳಾಶಾಸನ'**, **'ಶ್ರೀಶಾರದಾ ಸುಪ್ರಭಾತ'** ಹಾಡುತ್ತಿದ್ದೆವು. ನಂತರ ಜಪ, ಧ್ಯಾನ ಮುಗಿಸಿ. ೬.೪೫ – ೭ಕ್ಕೆ ಹೋಗಿ ತಿಂಡಿ ಮಾಡುತ್ತಿದ್ದೆವು. ತಿಂಡಿಯ

ನಂತರ ಬೇರೆ ಕೆಲಸ (ವಿತರಣೆ, ಗುಲ್ಬರ್ಗಾಕ್ಕೆ ಹೋಗುವುದು ಇತ್ಯಾದಿ) ಇಲ್ಲದಿದ್ದರೆ ಸ್ವಾಮಿ ಅಚಲಾನಂದರು ೪೫ ರಿಂದ ೬೦ ನಿಮಿಷ ವೇದಾಂತ ಪಾಠವನ್ನು ಮಾಡುತ್ತಿದ್ದರು – ಅವರೇ ಬರೆದ ದಕ್ಷಿಣಾಮೂರ್ತಿ ಸ್ತೋತ್ರದ **'ಮಾನಸೋಲ್ಲಾಸ'**ವನ್ನು ಆಧರಿಸಿ. ಸುಮಾರು ೯.೩೦ಕ್ಕೆ ಇತರ ಕೆಲಸಗಳು, ಅಡಿಗೆ ಮಾಡುವುದು ಇತ್ಯಾದಿ. ೧೨-೧೨.೩೦ ಗಂಟೆಗೆ ಊಟ. ನಂತರ ಸ್ವಲ್ಪ ವಿಶ್ರಾಂತಿ. ಸಮಯವಿದ್ದರೆ ನಾವುಗಳೇ ಏನಾದರೂ ಓದುತ್ತಿದ್ದೆವು. ಜಪ ಕೂಡ ಮಾಡುತ್ತಿದ್ದೆವು. ಸಾಮಾನ್ಯವಾಗಿ ಕತ್ತಲಾಗುವುದಕ್ಕೆ ಮುಂಚೆ ರಾತ್ರಿ ಊಟದ ತಯಾರಿ. ಎಲ್ಲರೂ ಸೇರಿ ಆರಾತ್ರಿಕ ಹಾಡುಗಳನ್ನು ಹಾಡುತ್ತಿದ್ದೆವು. ೮.೩೦-೯.೦೦ ಗಂಟೆಗೆ ಊಟ. ಕೆಲಸದವರು, ಅಡಿಗೆಯವರು ಯಾರೂ ಇಲ್ಲದಿದ್ದರೆ ಬ್ರಹ್ಮಚಾರಿಗಳೇ ಹಂಚಿಕೊಂಡು ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದೆವು.

ಸ್ವಾಮಿ ಅಚಲಾನಂದರು ಒಂದು ರೀತಿ ನಡೆದಾಡುವ ವಿಶ್ವಕೋಶ. ನಿಂತುಕೊಡೇ ಏನಾದರೂ ವಿಷಯ ಹೇಳಲು ಶುರು ಮಾಡಿದರೆ ಸುಮಾರು ಒಂದೆರಡು ಗಂಟೆಗಳು ಕಳೆದುಹೋಗುತ್ತಿತ್ತು. ಕೈತುಂಬ ಕೆಲಸವಿದ್ದರೂ ನಾವೆಲ್ಲ ಸಂತೋಷದಿಂದ ಶ್ರೀರಾಮಕೃಷ್ಣರ ಸೇವೆ ಮಾಡುತ್ತಿದ್ದೆವು.

ಬೆಂಗಳೂರಿನ ಬಸವನಗುಡಿಯಿಂದ ಹೊರಡುವ ಮುನ್ನ ಸ್ವಾಮಿ ಅಚಲಾನಂದರು ಒಂದು ಚಿಕ್ಕ ಬೀಗದಕೈ ಕೊಟ್ಟು, ''ಇದು ಆಫೀಸ್ (ಪೆಟ್ಟಿಗೆಗೆ ಹಾಗೆ ಹೇಳಿದರು). ನೀವು ಇದನ್ನು ನೋಡಿಕೊಳ್ಳಿ. ಹಣಕಾಸಿನ ವ್ಯವಹಾರ, ಗುಲ್ಬರ್ಗಕ್ಕೆ ಹೋಗಿ ವಿತರಣೆಗೆ ಧಾನ್ಯ ಕೊಳ್ಳುವುದು, ಲೆಕ್ಕ ಬರೆಯುವುದು ಇತ್ಯಾದಿಗಾಗಿ'' ಎಂದರು.

**ಸಣ್ಣಪುಟ್ಟ ಘಟನೆಗಳು:** ನಾವಿದ್ದ ಗಾಣಗಾಪುರದಲ್ಲಿ ಸುಮಾರು ೨೫-೩೦ ಕುಷ್ಠರೋಗಿಗಳಿದ್ದರು. ಅವರಿಗೆಲ್ಲ ಕಂಬಳಿ ಕೊಡಬೇಕೆಂದು ನಿರ್ಧರಿಸಿದೆವು. ಅದಕ್ಕೆ ಚಿಕ್ಕದೊಂದು ಸಮಾರಂಭ ಇಟ್ಟುಕೊಂಡೆವು. ಕಂಬಳಿಗಳನ್ನು ಪೋಲೀಸ್ ಕಮಿಷನರ್ ಗರುಡಾಚಾರ್ ಕೈಲಿ ಕೊಡಿಸುವುದೆಂದು ಅವರನ್ನು ಆಮಂತ್ರಿಸಲು ಸ್ವಾಮಿ ಅಚಲಾನಂದರು ಗುಲ್ಬರ್ಗಕ್ಕೆ ಹೋದರು. ಪೂರ್ವಾಶ್ರಮದಲ್ಲಿ ಸ್ವಾಮಿ ಅಚಲಾನಂದರು ಪಿ.ಡಬ್ಲ್ಯು.ಡಿ.ಯಲ್ಲಿ ಕಟ್ಟುನಿಟ್ಟಿನ, ಬಿಗಿಯಾದ, ಲಂಚಮುಟ್ಟದ ಅಧಿಕಾರಿಗಳೆಂದು ಪ್ರಸಿದ್ಧರಾಗಿದ್ದರು. ಒಬ್ಬರು ಜೂನಿಯರ್ ಇಂಜಿನಿಯರ್ ಇದನ್ನೆಲ್ಲ ಕೇಳಿದ್ದರೂ, ಆತನಿಗೆ ಇದು ಪಿ.ಡಬ್ಲ್ಯು.ಡಿ.ಯಲ್ಲಿ ಸಾಧ್ಯವೇ ಎಂದು ಅನ್ನಿಸಿತ್ತು. ಗರುಡಾಚಾರರನ್ನು ಕರೆಯಲು ಸ್ವಾಮಿ ಅಚಲಾನಂದರು ಗುಲ್ಬರ್ಗಕ್ಕೆ ಹೋಗಿದ್ದಾಗ, ಆ ಇಂಜಿನಿಯರ್ ಅವರನ್ನು ನೋಡಿ, ಮುಖ್ಯರಸ್ತೆಯಲ್ಲೇ ಸಾಷ್ಟಾಂಗ ಪ್ರಣಾಮ ಮಾಡಿದರು. ಗರುಡಾಚಾರ್ ಬಂದು ನಮ್ಮ ಶಿಬಿರದಲ್ಲಿ ಏರ್ಪಡಿಸಲಾಗಿದ್ದ ಒಂದು ಸಣ್ಣ ಸಮಾರಂಭದಲ್ಲಿ ಕುಷ್ಠರೋಗಿಗಳಿಗೆ ಕಂಬಳಿ ಹಂಚಿ, ಬರಗಾಲ ಸೇವಾಕೇಂದ್ರವನ್ನು ನೋಡಿ ಸಂತೋಷಪಟ್ಟರು.

**ಸೇವೆಯೆಂದರೆ ಹೀಗೆ ಮಾಡಬೇಕು:** ಗಾಣಗಾಪುರದಲ್ಲಿ ಒಂದು ಆಶ್ರಮವಿತ್ತು. ದಂಡವತೆ ಆಶ್ರಮ ಎನ್ನುತ್ತಿದ್ದುದು ಜ್ಞಾಪಕ. (ಮಹಾರಾಷ್ಟ್ರದಲ್ಲಿ ಈಗ ಇದು ಒಂದು ಬಿರುದು. ನಡೆಯುವ ಬದಲು ದಂಡವತ್ ಪ್ರಣಾಮ ಮಾಡುತ್ತಾ ದೇವಸ್ಥಾನವನ್ನೋ, ತೀರ್ಥಸ್ಥಾನವನ್ನೋ ಸೇರುವುದು. ಇದಕ್ಕೆ ಕೆಲವೇ ಗಂಟೆಗಳು ಸಾಕಾಗಬಹುದು, ಕೆಲವು ದಿನಗಳೋ, ಕೆಲವು ತಿಂಗಳುಗಳೋ ಬೇಕಾಗಬಹುದು. ಇದು ಒಂದು ವ್ರತ. ಇದಕ್ಕೆ ಶ್ರದ್ಧೆ, ದೈಹಿಕ ಮತ್ತು ಮಾನಸಿಕ ಶಕ್ತಿ ಎರಡೂ ಬೇಕು). ದಂಡವತೆಗಳು ಗೃಹಸ್ಥ ಸಾಧುಗಳು. ಆ ಆಶ್ರಮವನ್ನು ಅವರ ಒಬ್ಬ ಶಿಷ್ಯ, ಮಾಧವರಾವ್ ಎನ್ನುವ ಬ್ರಹ್ಮಚಾರಿ ನೋಡಿಕೊಳ್ಳುತ್ತಿದ್ದರು. ಗುರುಗಳ ಆದೇಶದಂತೆ ಅವರು ಆ ಊರಿನ ಕುಷ್ಠರೋಗಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಿದ್ದರು. ಕುಷ್ಠರೋಗಿಗಳ ಕಾಲನ್ನು ತೊಳೆದು ಅವರು ಕುಳಿತುಕೊಳ್ಳುತ್ತಿದ್ದ ಜಾಗದಲ್ಲಿ ತಟ್ಟೆ ಮುಂದೆ ರಂಗೋಲಿ ಹಾಕಿ ಅವರೆಲ್ಲರಿಗೂ ಹಾಡುತ್ತ ಆರತಿ ಬೆಳಗುತ್ತಿದ್ದರು. ಇದನ್ನು ನೋಡಿ ನಮಗೆಲ್ಲ ತುಂಬಾ ಸಂತೋಷವಾಯಿತು. ಅಚಲಾನಂದರು ಅವರೆಲ್ಲರಿಗೂ ರಾತ್ರಿಯ ಊಟಕೋಸ್ಕರ ಧಾನ್ಯದ ವ್ಯವಸ್ಥೆ ಮಾಡಿದರು. ಮಧ್ಯಾಹ್ನ ಊಟದ ನಂತರ ರಾತ್ರಿ ಊಟ, ರೊಟ್ಟಿ, ಪಲ್ಯ ತೆಗೆದು ಕೊಂಡು ಹೋಗುತ್ತಿದ್ದರು. ನಾವಿರುವವರೆಗೂ ಈ ಸೇವೆ ನಡೆಯಿತು.

**ಬಡತನಕ್ಕಿಂತ ಪಾಪವುಂಟೇ !** ಬಡತನ ಮನುಷ್ಯನನ್ನು ಯಾವ ದೆಶೆಗೆ ಎಳೆಯುತ್ತದೆ; ಯಾವ ರೀತಿ ಕೆಲಸ ಮಾಡಿಸುತ್ತದೆ! ಬಡತನದಿಂದಾಗಿ ಹಸಿವು ತಾಳಲಾಗದ ಮನುಷ್ಯ ಎಂಥ ಅಧೋಗತಿಗೆ ಬರುತ್ತಾನೆ !

ಪುರಾಣದಲ್ಲಿ ವಿಶ್ವಾಮಿತ್ರನ ಕಥೆ ಬರುತ್ತದೆ. ಕ್ಷಾಮದ ಭೀಕರ ತಾಂಡವ! ವಿಶ್ವಾಮಿತ್ರನು ಹಸಿವಿನ ಬೇಗೆ ತಾಳಲಾರದೆ ಚಂಡಾಲನ ಮನೆಯಲ್ಲಿ ನಾಯಿ ಮಾಂಸ ಕದ್ದು ತಿಂದನೆಂಬ ವಿಷಯ ಬರುತ್ತದೆ. ಹಸಿವಿನ ಕರಾಳ ಮುಖ ತೋರಿಸಲು ಬರೆದಿರುವ ಉತ್ಪ್ರೇಕ್ಷೆಯಿರಬಹುದು. ಆದರೆ – ಅಂದು ರಾತ್ರಿ, ನಾನು ನೋಡಿದ್ದು...!

ನಾವು ತಂಗಿದ್ದ ಶಿಬಿರದಲ್ಲಿ ಯಾತ್ರಿಗಳು ಆಗಾಗ ಮದುವೆಯನ್ನು ಕೂಡ ಮಾಡುತ್ತಿದ್ದರು. ಅಂದು ರಾತ್ರಿ ಏನೋ ಗದ್ದಲ. ಸುಮಾರು ಮಧ್ಯರಾತ್ರಿ ಇರಬಹುದು. ನಾನು ಶೌಚಾಲಯದ ಕಡೆ ಹೊರಟೆ. ಆದರೆ ನೋಡಿದ್ದೇನು! ಮದುವೆ ಮನೆಯ ಔತಣ ತಿಂದು ಎಲೆ ಬಿಸಾಡಿದ್ದಾರೆ. ಅದರ ಮಧ್ಯದಲ್ಲಿ ಯಾರೋ ಒಬ್ಬಾತ ಎಂಜಲೆಲೆ ಹುಡುಕಿ ಎಲೆಯಲ್ಲಿ ಉಳಿದದ್ದನ್ನು ತಿನ್ನುತ್ತಿದ್ದಾನೆ! ನೋಡಿ, ನನಗೆ ಸಿಡಿಲು ಬಡಿದಂತಾಯಿತು. ಆತನ ಪರಿಚಯ ನನಗೇ ಮೊದಲೇ ಇತ್ತು. ಆದರೆ ಮಾತನಾಡುವ ಪರಿಸ್ಥಿತಿಯಲ್ಲಿರಲಿಲ್ಲ. ಬೆಳಿಗ್ಗೆ ಸುಮಾರು ೮ ಗಂಟೆಗೆ ಅವನನ್ನು ನೋಡಿ ಬೈದೆ. ನನಗೂ ಅಳು ಬಂತು. ಅವನೂ ಅತ್ತ. ಅದು ನೆನಪಾದರೆ ಇಂದಿಗೂ ದುಃಖವಾಗುತ್ತದೆ.

ಆತ ನಮ್ಮ ಕ್ಯಾಂಪಿಗೆ ಒಂದೆರಡು ಸಲ ಬಂದಿದ್ದ. ಅವನಿಗೆ ಸುಮಾರು ೩೦-೪೦ ಎಕರೆ ಭೂಮಿ ಇತ್ತು. ಎರಡು ಮೂರು ವರ್ಷ ಮಳೆಯಿಲ್ಲದ್ದರಿಂದ ಸಾಲಗಾರನಾಗಿ, ಸಾಲ ತೀರಿಸುವ ದಾರಿ ಕಾಣದೆ, ಗಾಣಗಾಪುರಕ್ಕೆ ಬಂದಿದ್ದ. ಭಿಕ್ಷೆ ಬೇಡಲು ಸ್ವಾಭಿಮಾನ ಅಡ್ಡಿಯಾಗುತ್ತದೆ. ಕೂಲಿ ಮಾಡಿ ಅಭ್ಯಾಸವಿಲ್ಲ. ಅವನಿಗೆ ಸುಮಾರು ೬೦ ವರ್ಷ ವಯಸ್ಸಾಗಿದ್ದಿರಬೇಕು. ಆದರೆ ಹಸಿವು.. ದಾರಿಕಾಣದೆ ಆ ಕೆಲಸ ಮಾಡಿದ್ದ. ನಂತರ ಅವನಿಗೆ ಏನೋ ಒಂದು ಕೆಲಸ ಕೊಟ್ಟೆವು – ದುಡಿದುಂಬಲು.

**ಬೆಳ್ಳುಳ್ಳಿ ಸಾರು:** ನಮ್ಮ ಎರಡನೆಯ ವಿತರಣಾ ಕೇಂದ್ರ ಕರಜಗಿಯಲ್ಲಿ ಸರ್ವೆ ಕೆಲಸ ಮಾಡಲು ಒಂದು ದಿನ ಎರಡು ಗುಂಪುಗಳಾಗಿ ಹೊರಟೆವು. ನಾನು ಮತ್ತು ಒಬ್ಬ ಬ್ರಹ್ಮಚಾರಿ ಬೆಳಗ್ಗೆ ಸುಮಾರು ೮ ಗಂಟೆಗೆ ಬಸ್ಸಿನಲ್ಲಿ ಹೊರಟು, ನಂತರ ನಡೆದು ನಮ್ಮ ಯೋಜನಾನುಸಾರ ಕೆಲಸ ಮುಗಿಸಿ, ಮತ್ತೂ ಸಮಯ ಉಳಿದ ಕಾರಣ ಇನ್ನೂ ಒಂದೆರಡು ಹಳ್ಳಿಗಳಿಗೆ ಶೇರ್ ಆಟೋ ಹಿಡಿದು ಹೋಗುವ ಹೊತ್ತಿಗೆ ಸಂಜೆಯಾಗಿತ್ತು. ಅಲ್ಲಿ ಕೆಲಸ ಮುಗಿಸಿ ಹೊರಟಾಗ ರಾತ್ರಿ ೮ ಗಂಟೆಯಾಗಿತ್ತು. ನಮ್ಮ ಶಿಬಿರ-ಕರಜಗಿ ಡಾಕ್ ಬಂಗಲೆಗೆ ಹಿಂತಿರುಗಬೇಕಾಗಿತ್ತು. ಹಳ್ಳಿಯವರು ''ಹೋಗಬೇಡಿ, ಊರು ತುಂಬ ದೂರ (ಸು. ೧೦ ಕಿ.ಮೀ). ಭಯಂಕರ ಕತ್ತಲು, ರಸ್ತೆಯಲ್ಲಿ ಸ್ಮಶಾನ ಬೇರೆ, ದೆವ್ವಗಳಿವೆ'' ಎಂದೆಲ್ಲ ಹೇಳಿದರು. ನಾವಿಬ್ಬರೂ ಮಾತಾಡಿಕೊಂಡು ಹೊರಟು ನಿಂತೆವು. ನಾನು ಹೇಳಿದೆ, ''ನಿಮಗೆ ತೊಂದರೆಯಾಗದಿದ್ದಲ್ಲಿ ಲಾಟೀನ್ ಕೊಟ್ಟು, ಜೊತೆಗೆ ಯಾರನ್ನಾದರೂ ಕಳಿಸಿ. ನಾನು ಹೋಗಲೇಬೇಕು (ಹಣವೆಲ್ಲ ನನ್ನ ಹತ್ತಿರವಿತ್ತು). ಮತ್ತೆ ನಾಳೆಯ ದಿನ ಕೆಲಸ ಮುಗಿಸಬೇಕು'' ಎಂದು. ಆ ಹಳ್ಳಿಯ ರಸ್ತೆಯ ಅಂಧಕಾರ, ನೀರವತೆಯಲ್ಲಿ ನಡೆದು ಬಂದು ಟಿ.ಬಿ. ಸೇರಿದಾಗ ಸುಮಾರು ೧೨ ಗಂಟೆಯಾಗಿತ್ತು. ತುಂಬ ದಣಿವಾಗಿತ್ತು. ಹಸಿವು ಬೇರೆ! ಸಾಮಾನ್ಯವಾಗಿ ಟಿ.ಬಿ.ಯನ್ನು ನೋಡಿಕೊಳ್ಳುತ್ತಿದ್ದವ ಹೋಟೆಲಿನಿಂದ ಊಟ ತಂದಿಟ್ಟಿರುತ್ತಿದ್ದ. ಆ ಜಾಗದಲ್ಲಿ ಹೋಟೆಲ್ ಇಲ್ಲದ್ದರಿಂದ ಅವನೇ ಮಾಡಿದ್ದ. ಅವನಿಗೆ ಬೆಳ್ಳುಳ್ಳಿ ಇಲ್ಲದೆ ಅಡುಗೆ ಮಾಡಲು ಬರುವುದಿಲ್ಲವೆಂದು ಕಾಣುತ್ತದೆ. ಬರೀ ಬೆಳ್ಳುಳ್ಳಿ ವಾಸನೆ. ಬೆಳ್ಳುಳ್ಳಿ ಅಭ್ಯಾಸವಿಲ್ಲದ ನಮಗೆ ಊಟ ಮಾಡಲು ಕುಳಿತರೆ ಗಂಟಲೊಳಕ್ಕೆ ಇಳಿಯುವುದೇ ಇಲ್ಲ. ಶ್ರೀರಾಮಕೃಷ್ಣರ ಹೆಸರು ಹೇಳಿ ಹೇಗೋ ಸ್ವಲ್ಪ ನುಂಗಿ, ದೇವರೇ ಗತಿಯೆಂದು ಮಲಗಿದೆವು.

**ಒಂದೆಡೆ ಹಸಿದವರು, ಮತ್ತೊಂದೆಡೆ ಹೊಟ್ಟೆ ತುಂಬಿದವರು:** ನಾವು ಕಾರ್ಡ್ ಹಂಚಿದ ಹಳ್ಳಿಗಳಲ್ಲಿ ಅದು ಕೊನೆಯದು. ನಮ್ಮ ಶಿಬಿರದಿಂದ ಸುಮಾರು ೧೦-೧೨ ಕಿ.ಮೀ.ದೂರವಿತ್ತು. ಬಸ್ಸಿನ ಸೌಕರ್ಯವಿದ್ದುದರಿಂದ ನಾನು ಮತ್ತು ಒಬ್ಬ ಬ್ರಹ್ಮಚಾರಿ ಹೊರಟೆವು. ನಮ್ಮ ಪದ್ಧತಿಯಂತೆ ಹಳ್ಳಿಯ ಪಟೇಲ ಅಥವಾ ಯಾರಾದರೂ ಜವಾಬ್ದಾರಿಯ ಹಿರಿಯರನ್ನು ವಿಚಾರಿಸುತ್ತಾ ಹೊರಟೆವು. ಅದು ಸ್ವಲ್ಪ ದೊಡ್ಡ ಹಳ್ಳಿಯೆಂದೇ ಹೇಳಬಹುದು. ಸ್ವಲ್ಪ ದೂರ ಹೋದ ನಂತರ ಊರಿನ ಪಟೇಲ ಮತ್ತು ಅವನ ತಂದೆ ಮಾತಾಡುತ್ತ ಒಂದು ಮರದ ಕೆಳಗೆ ಕುಳಿತಿರುವುದನ್ನು ಜನ ತೋರಿಸಿದರು. ನಾವು ಹತ್ತಿರ ಹೋಗಿ ಪರಿಚಯ ಹೇಳಿ, ಊರ ಬಗ್ಗೆ ಕೇಳಿದೆವು. ಪಟೇಲ ಸ್ವಲ್ಪ ಗಡುಸಾಗಿಯೇ ಹೇಳಿದ, ''ಇಲ್ಲಿ ಬಡವರ್‍ಯಾರೂ ಇಲ್ಲರೀ..'' ಅದನ್ನು ಕೇಳಿ ನನಗೆ ಸಿಟ್ಟು ಬಂತು. ''ಹಾಗೋ, ಇಲ್ಲಿ ಬಡವರಿಲ್ಲವೆ? ನೀವೆಲ್ಲ ಹೊಟ್ಟೆ ತುಂಬಿದವರೆಂದು ಕಾಣುತ್ತೆ. ಅದಕ್ಕೆ ಹೀಗೆ ಮಾತನಾಡುತ್ತೀರಿ'' ಎಂದೆ. ನನ್ನ ಜೊತೆಯಲ್ಲಿದ್ದ ಬ್ರಹ್ಮಚಾರಿಗೆ ಹೇಳಿದೆ, ''ನಡೆಯಿರಿ ಮಹಾರಾಜ್, ೪೫೦-೫೦೦ ಕಿ.ಮೀ. ದೂರದಿಂದ ಬಂದವರಿಗೆ ಕೆಲಸ ತಿಳಿಯದೆ? ನಾವೇ ವಿಚಾರಿಸೋಣ. ಇವರ ಸಹಾಯವೇ ಬೇಡ.'' ಮುದುಕ (ಪಟೇಲ) ಮಗನಿಗೆ ಹೇಳಿದ, ''ಏ ಮಗ, ಅವರು ಹೇಳುವುದು ಸರಿಯಾಗಿದೆ. ಹೋಗು, ಸುಮ್ಮನೆ ಕೂರಬೇಡ.'' (ಆ ಕಡೆಯ ಜನ ಸ್ವಲ್ಪ ಒರಟು ಸ್ವಭಾವದವರು. ನನ್ನ ಮಾತನ್ನು ಕೇಳಿ ಹೊಡೆದು ಬಿಡುತ್ತಿದ್ದರೇನೋ! ಹಾಗಾಗಲಿಲ್ಲ – ಶ್ರೀರಾಮಕೃಷ್ಣರ ಕೃಪೆ). ನಾನು ಹೇಳಿದೆ, ''ಬೇಡ, ನಿಮ್ಮ ಹಂಗೇ ಬೇಡ. ನಾವೇ ಹೋಗಿ ವಿಚಾರಿಸುತ್ತೇವೆ.'' ನಾವಿಬ್ಬರೂ ಅಲ್ಲಿಂದ ಹೊರಟೆವು. ಮುದುಕ ಹಿಂಬಾಲಿಸಿ ಬಂದ. ವಿಚಾರಿಸುತ್ತ, ಕಾರ್ಡು ಕೊಡುತ್ತ ನಾವು ಹೊಲಗೇರಿಗೆ ಬಂದೆವು. ನಾವು ಅಲ್ಲಿ ನೋಡಿದ್ದೇನು? ಹರಕಲು ಸೀರೆಗಳನ್ನುಟ್ಟ ಹೆಂಗಸರು, ಚಿಂದಿಬಟ್ಟೆ, ಬೆತ್ತಲೆ ಮಕ್ಕಳು. ಒಬ್ಬ ಗಂಡಸೂ ಇಲ್ಲ. ಬರಗಾಲವಾದ್ದರಿಂದ ಕೆಲಸ ಹುಡುಕಿಕೊಂಡು ಬೇರೆಲ್ಲಿಗೋ ಹೊರಟು ಹೋಗಿದ್ದರು. ಹಿಂದಿರುಗುವ ಸಂಭವ ಅತಿ ವಿರಳವಾಗಿತ್ತು. ಹೊರಗೆ ಹೋದವರು ಅಲ್ಲಿಯೇ ಬೇರೊಂದು ಮದುವೆಯಾಗಿ ಇದ್ದುಬಿಡುವುದೂ ಉಂಟು. ಇಲ್ಲಿರುವವರು ಹೆಂಗಸರು, ಮಕ್ಕಳು, ವೃದ್ಧರು..! ಭಗವಂತನೇ ಗತಿ! ಕೂಲಿ ಸಿಕ್ಕಿದಾಗ ಊಟ, ಇಲ್ಲದಿದ್ದಾಗ ಉಪವಾಸ. ಸಾಧ್ಯವಾದಷ್ಟು ಕಾರ್ಡುಗಳನ್ನು ಕೊಟ್ಟು ನಾವು ಹಿಂತಿರುಗಿದೆವು. ಬಹುಶಃ ಈ ಹಳ್ಳಿಯಲ್ಲೇ ಅತ್ಯಂತ ಅಧಿಕ ಸಂಖ್ಯೆಯಲ್ಲಿ ಕಾರ್ಡು ಕೊಟ್ಟಿರಬಹುದು.

**ಒಂದು ಭಯಂಕರ ರಾತ್ರಿ:** ಬರಗಾಲ ವಿತರಣೆಗೆ ಧಾನ್ಯ ಕೊಳ್ಳಲು ಹೋಗುವುದು ನನ್ನ ಕೆಲಸವಾಗಿತ್ತು. ಬಡವರ ಸೇವೆಗೆ ಇರುವ ಹಣವನ್ನು ಸಾವಧಾನವಾಗಿ ಉಪಯೋಗಿಸಬೇಕೆಂದು ಸಾಮಾನ್ಯವಾಗಿ ಗುಲ್ಬರ್ಗಕ್ಕೆ ನಾನೊಬ್ಬನೇ ಹೋಗುತ್ತಿದ್ದೆ. ಬೆಳಿಗ್ಗೆ ಹೋಗಿ, ಕೆಲಸಗಳೆಲ್ಲ ಮುಗಿದರೆ, ಸಾಯಂಕಾಲ ಹಿಂತಿರುಗುತ್ತಿದ್ದೆ. ಒಂದೊಂದು ಸಲ ರಾತ್ರಿ ಯಾತ್ರಿಕರ ನಿವಾಸದಲ್ಲಿದ್ದು ಮರುದಿನ ಬೆಳಿಗ್ಗೆ ಹಿಂತಿರುಗುತ್ತಿದ್ದೆ. ಈ ವಿಚಾರವಾಗಿ ಸ್ವಾಮಿ ಅಚಲಾನಂದರು ಕೂಡ ನಿರ್ದಿಷ್ಟವಾಗಿ ಏನೂ ಹೇಳಿರಲಿಲ್ಲ. ಒಂದು ದಿನ ಎಂದಿನಂತೆ ಸೇವಾ ಕಾರ್ಯಕ್ಕೆ ಧಾನ್ಯ ತರಲು ಗುಲ್ಬರ್ಗಕ್ಕೆ ಹೋದೆ. ಡಿ.ಸಿ. ಯವರನ್ನು ನೋಡಿ, ಗೋಧಿ ದಾಸ್ತಾನು ಇದ್ದದ್ದರಿಂದ ಬ್ಯಾಂಕ್ ಡ್ರಾಫ್ಟ್ ಮಾಡಿಸಿ ಗೋಧಿ ಬಿಡುಗಡೆ ಮಾಡಲು ರಸೀದಿಯನ್ನು ತೆಗೆದು

ಕೊಂಡು ಮಂಡಿಗೆ ಹೋಗಿ ಗೋಧಿ ಮೂಟೆಗಳನ್ನು ತಂದು ಉಗ್ರಾಣದ ಹತ್ತಿರ ಇರಿಸಿದೆ. ಸಾಮಾನ್ಯವಾಗಿ ಕೂಲಿಯವರು ಯಾರಾದರೂ ಅದರ ಹತ್ತಿರ ಇರುತ್ತಿದ್ದರು. ಅದನ್ನು ಸಾಗಿಸಲು ಸರಕಾರದವರು ಒಂದೆರಡು ಬಾರಿ ಲಾರಿಯನ್ನು ಕೊಟ್ಟಿದ್ದರೂ ಇದು ಯಾವಾಗಲೂ ಲಭ್ಯವಿರಲಿಲ್ಲ. ಆದ್ದರಿಂದ ನಾವು ಬಾಡಿಗೆ ಲಾರಿಯನ್ನೇ ತೆಗೆದುಕೊಳ್ಳಬೇಕಾಗುತ್ತಿತ್ತು. ಅಂದು ಲಾರಿಗೋಸ್ಕರ ತುಂಬ ಹುಡುಕಬೇಕಾಯಿತು. ಕೊನೆಗೆ ಒಬ್ಬ ಮುಸಲ್ಮಾನ ಲಾರಿ ಕಂಪನಿಯ ಮಾಲೀಕ ಹೇಳಿದ, ''ನನ್ನಲ್ಲಿ ೪-೫ ಲಾರಿಗಳಿವೆ, ಒಂದಲ್ಲ ಒಂದು ಬಂದೇ ಬರುತ್ತದೆ, ನೀವೇನೂ ಯೋಚಿಸಬೇಡಿ, ನಾನು ಕೊಡುತ್ತೇನೆ.'' ನಂತರ ನಾನು ಹೋಟೆಲ್ ಊಟ ಮಾಡಿ ಲಾರಿಗಾಗಿ ಕಾಯುತ್ತಾ ಕುಳಿತೆ. ಸಾಯಂಕಾಲ ಆರು ಗಂಟೆಯಾದರೂ ಲಾರಿ ಬರಲಿಲ್ಲ, ಸರ್ಕಾರಿ ಉಗ್ರಾಣ ಮುಚ್ಚುವವರಿದ್ದರು. ಲಾರಿ ಯಜಮಾನನನ್ನು ನಂಬಿ ಗೋಧಿ ತೆಗೆಸಿ ಅಲ್ಲೇ ಜೋಳದ ಮೂಟೆಗಳ ಪಕ್ಕದಲ್ಲೇ ಇರಿಸಿದೆ. ಆದರೆ ರಾತ್ರಿ ಹನ್ನೆರಡಾದರೂ ಯಾವ ಲಾರಿಯೂ ಪತ್ತೆಯಿಲ್ಲ. ಇನ್ನು ಸುಮ್ಮನೆ ಕಾಯ್ದು ಕುಳಿತರೆ ಪ್ರಯೋಜನವಿಲ್ಲ ಎಂದು ಭಾವಿಸಿ, ಟಾರ್ಚ್ ಲೈಟ್ ಹಿಡಿದು, ಗುಲ್ಬರ್ಗದ ಬೀದಿಗಳನ್ನೆಲ್ಲ ಸುತ್ತಿದೆ. ಕೊನೆಗೊಬ್ಬ ಲಾರಿಯವನು ಒಂದು ಮೂಟೆಗೆ ೪-೫ ಕೊಟ್ಟರೆ ಬರುವೆನೆಂದ (ಆಗೆಲ್ಲ ಮೂಟೆಗೆ ಇಷ್ಟೆಂದು ಲೆಕ್ಕ. ಸರ್ಕಾರಿ ನಿಗದಿತ ಬೆಲೆ ಒಂದು ಮೂಟೆಗೆ ರೂ.೧). ಆತ ಅರ್ಧಗಂಟೆ ಕಾಯ್ದರೆ, ಊಟ ಮಾಡಿ ಬರುವೆನೆಂದ. ಬೇರೆ ದಾರಿಯಿಲ್ಲ, ಕಾಯಲೇಬೇಕು. ಅವನ ಜೊತೆ ಹೋಗಿ ಅವನ ಮನೆಯ ಹತ್ತಿರವಿದ್ದ ಲಾರಿಯಲ್ಲಿ ಕುಳಿತೆ. ಆ ಜಾಗವಾಗಲೀ, ಮನುಷ್ಯನಾಗಲೀ ಒಂದೂ ತಿಳಿಯದು. ಶ್ರೀರಾಮಕೃಷ್ಣರೇ ಗತಿಯೆಂದು ಹೀಗೆ ಮಾಡಿದೆ. ಡ್ರೈವರ್ ಜೊತೆ ನಾನು ಸರಕು ಇಟ್ಟಿದ್ದ ಜಾಗಕ್ಕೆ ಬಂದೆ. ನಾನು ಬಿಟ್ಟಿದ್ದ ಒಬ್ಬಿಬ್ಬ ಕೂಲಿಗಳ ಜೊತೆ ಮುಸಲ್ಮಾನ ಲಾರಿಯ ಜನಗಳೂ ಕುಳಿತಿದ್ದರು. ನಾವು ಸರಕನ್ನು ಕಾಯದೆ ಬಿಡುವುದಿಲ್ಲ. ನಮ್ಮ ಮಾಲೀಕ ಇರಲು ಹೇಳಿದ್ದಾನೆ ಎಂದರು. ಅವರನ್ನು ಬೈದು ಕಳಿಸಿದೆ, ಜೊತೆಗೆ ಕಾಫಿ ಕುಡಿಯಲು ಸ್ವಲ್ಪ ಹಣ ಕೊಟ್ಟೆ.

ಇದರಿಂದ ನನಗೆ ದೇವರು ಒಂದು ಪಾಠ ಕಲಿಸಿದ - ಸಾಮಾನ್ಯವಾಗಿ ಕೂಲಿಗಳು ಒಳ್ಳೆಯವರಿರುತ್ತಾರೆ. ಪ್ರಾಮಾಣಿಕರು. ಸ್ವಲ್ಪ ಕೂಲಿಗಾಗಿ ಬೇಡುತ್ತಾರೆಯೇ ಹೊರತು ಕಳ್ಳತನ ಮಾಡುವುದಿಲ್ಲ. ಸ್ವಲ್ಪ ಗೋಧಿ ಜೋಳ ಕದ್ದಿದ್ದರೆ ನನಗೇನೂ ತಿಳಿಯುತ್ತಿರಲಿಲ್ಲ. ತಿಳಿದಿದ್ದರೂ ಆ ಪರಿಸ್ಥಿತಿಯಲ್ಲಿ ನಾನು ಮಾಡುವುದು ತಾನೆ ಏನು?! ಸರಕು ಲಾರಿಗೆ ತುಂಬಿಸಿ ಗುಲ್ಬರ್ಗ ಬಿಟ್ಟಾಗ ಸುಮಾರು ಮಧ್ಯರಾತ್ರಿ ೧.೩೦ ಗಂಟೆಯಾಗಿತ್ತು. ಆಗ ಗುಲ್ಬರ್ಗ ಅಂತಹ ದೊಡ್ಡ ಊರೇನಾಗಿರಲಿಲ್ಲ. ಗಾಣಗಾಪುರದ ಕಡೆಗೆ ಹೊರಟಾಗ ಕಗ್ಗತ್ತಲು, ವಸತಿಗಳಿಲ್ಲದ ರಸ್ತೆ. ಆಗ ರಸ್ತೆ ಪಕ್ಕದಲ್ಲಿ ಹಳ್ಳಿಗಳು ವಿರಳ. ನಿರ್ಜನ ಪ್ರದೇಶ. ಸುಮಾರು ಅರ್ಧ ದಾರಿ ಬಂದಾಗ ನನಗೆ ಹೆದರಿಕೆ ಶುರುವಾಯಿತು. ಶ್ರೀರಾಮಕೃಷ್ಣರನ್ನು ಪ್ರಾರ್ಥಿಸುತ್ತ ಕುಳಿತಿದ್ದೆ. ಕಾರಣ ಕೆಲವು ದಿನಗಳ ಹಿಂದೆಯೇ ಇಲ್ಲಿಗೆ ಸಮೀಪದಲ್ಲಿ ಯಾರೋ ಸಾಧು ಭಿಕ್ಷೆ ಬೇಡಿ, ದವಸ ಸಂಗ್ರಹಿಸಿ ಬಡವರಿಗೆ ಹಂಚುತ್ತಿದ್ದ. ಒಂದು ರಾತ್ರಿ ದರೋಡೆಕೋರರು ಮುತ್ತಿಗೆ ಹಾಕಿ ಆತ ಪೂಜಿಸುತ್ತಿದ್ದ ವಿಗ್ರಹವನ್ನೂ ಬಿಡದೆ ಲೂಟಿ ಮಾಡಿದ್ದರು. ಅಂತೂ ಅನಾಥರಕ್ಷಕ, ಆಪದ್ಬಾಂಧವ ಶ್ರೀರಾಮಕೃಷ್ಣರ ಕೃಪೆ ನನಗೆ ಏನೂ ಆಗಲಿಲ್ಲ. ನಮ್ಮ ಶಿಬಿರ ತಲುಪಿದಾಗ ಮಧ್ಯರಾತ್ರಿ ೩.೩೦ ಗಂಟೆ. ಹಳ್ಳಿಯವರು ಛತ್ರದ ವರಾಂಡ ಮತ್ತು ಬೇರೆ ಸ್ಥಳಗಳಲ್ಲಿ ಮಲಗಿದ್ದರು. ಅವರನ್ನೆಲ್ಲ ಎಬ್ಬಿಸಿ ಕಾಫಿ ಕೊಡಿಸುವುದಾಗಿ ಹೇಳಿ ಲಾರಿಯಿಂದ ಸರಕನ್ನು ಇಳಿಸಿದ್ದಾಯಿತು. ಸುಮಾರು ೪.೧೫ - ೪.೩೦ಕ್ಕೆ ಮಲಗಿದೆ. ಇನ್ನು ಮೇಲೆ ಸ್ವಾಮಿ ಅಚಲಾನಂದರು ಲಾರಿ ವ್ಯವಸ್ಥೆ ಮಾಡದಿದ್ದರೆ ಹೋಗುವುದಿಲ್ಲವೆಂದು ಮನಸ್ಸಿನಲ್ಲಿ ಬರುತ್ತಿದ್ದಂತೆಯೇ ಉತ್ತರವೂ ಹೊಳೆಯಿತು. ಅವರು ತಾನೇ ಎಲ್ಲಿಂದ ಅಣಿಮಾಡಿಯಾರು? ಈ ಅನುಭವದ ನಂತರ ಜೊತೆಗೆ ಒಬ್ಬಿಬ್ಬರು ಅನುಭವೀ ಸ್ವಯಂಸೇವಕರನ್ನು ಕರೆದುಕೊಂಡು ಹೋಗುತ್ತಿದ್ದೆ. ಇದಾದ ನಂತರ ಶ್ರೀರಾಮಕೃಷ್ಣರ ಕೃಪೆಯಿಂದ 'ಅತನೂರು ಟ್ರಾನ್ಸ್‌ಪೋರ್ಟ್ಸ್' ಮಾಲೀಕರ ಪರಿಚಯವಾಯಿತು. ತುಂಬ ಸಜ್ಜನರು, ಮುಂದೆ ಯಾವ ತೊಂದರೆಯೂ ಆಗಲಿಲ್ಲ.

**ಸೇವಾಕಾರ್ಯದಲ್ಲೂ ಏಕಾದಶಿವ್ರತ:** ನಮ್ಮ ಶಿಬಿರದಲ್ಲಿ ಒಬ್ಬರು ಸ್ವಯಂಸೇವಕರು ಇದ್ದರೆಂದು ಹಿಂದೆಯೇ ತಿಳಿಸಿದ್ದೆ. ಒಬ್ಬನೇ ಹೋಗುವುದು ಸರಿಯಲ್ಲವೆಂದು ಅವರನ್ನು ಜೊತೆಗೆ ಕರೆದುಕೊಂಡು ಹೋಗುತ್ತಿದ್ದೆ. ಆತನ ಏಕಾದಶಿ ನಿಷ್ಠೆ ಎಷ್ಟಿತ್ತೆಂದರೆ - ಗುಲ್ಬರ್ಗಾಕ್ಕೆ ಹೋದಾಗಲೂ ಎಷ್ಟು ಹೇಳಿದರೂ ಕಾಫಿ, ಟೀ, ಹಾಲು ಅಷ್ಟೇಕೆ ನೀರನ್ನು ಕೂಡ ತೆಗೆದುಕೊಳ್ಳುತ್ತಿರಲಿಲ್ಲ. ಗುಲ್ಬರ್ಗಾದಲ್ಲಿ ನನ್ನ ಜೊತೆ ಇಡೀ ದಿನ ಸುತ್ತಬೇಕಾಗುತ್ತಿತ್ತು. ಆದರೆ ಸ್ವಲ್ಪವಾದರೂ ಆಯಾಸವಾಗಲಿ, ತೊಂದರೆಯಾಯಿತೆಂಬ ಬೇಜಾರಾಗಲಿ ಇರುತ್ತಿರಲಿಲ್ಲ. ನಂತರ ಯಾವಾಗಲೋ ಅವರಿದ್ದ ರಾಮಕೃಷ್ಣ ಮಹಾಸಂಘದ ಬಾಂಬೆ ಶಾಖೆಗೆ ಒಮ್ಮೆ ಹೋಗಿದ್ದೆ. ೩೭ ವರ್ಷಗಳ ನಂತರ ಭೇಟಿಯಾದರೂ ಅದೇ ರೀತಿ, ಎಂದರೆ ನಿರ್ಜಲ ಏಕಾದಶಿ ಮಾಡುತ್ತಿದ್ದರು. ಅವರ ಸೇವಾಭಾವ ಕೂಡ ಹಾಗೆಯೇ. ಯಾವ ವಿಧವಾದ ಭೇದಭಾವಗಳಿಲ್ಲದೆ ಎಲ್ಲರಿಗೂ ಕೈಲಾದಷ್ಟು ಸಹಾಯ ಸೇವೆ ಮಾಡುತ್ತಲೇ ಇದ್ದರು.

**ಸ್ವಾರ್ಥಪರತೆ ಸೇವಾಕಾರ್ಯಕ್ಕೆ ಧಕ್ಕೆ:** ಕುಷ್ಠರೋಗಿಗಳಿಗೆ ಊಟದ ವ್ಯವಸ್ಥೆ, ಕಂಬಳಿ ಕೊಡಲಾಗಿತ್ತು. ಅವರು ಇದ್ದದ್ದು ಊರ ಹೊರಗೆ, ಚರಂಡಿ ಪಕ್ಕದ ಸಣ್ಣ ಸಣ್ಣ ಗುಡಿಸಲುಗಳು. ಅದನ್ನು ನೋಡಿ ನಮಗೆಲ್ಲ ಮನಸ್ಸಿಗೆ ನೋವಾಯಿತು. ಅವರುಗಳಿಗೆಲ್ಲ ವಸತಿ ವ್ಯವಸ್ಥೆ ಮಾಡಲು ನಮಗೆಲ್ಲ ತುಂಬ ಕಾತರ. ಜೊತೆಗೆ ಎಲ್ಲರಲ್ಲೂ ಉತ್ಸಾಹವಿತ್ತು. ಆದರೆ ಆ ಸೇವೆ ಮಾಡಲು ಮುಖ್ಯವಾದ ಲಕ್ಷ್ಮೀ ಕಟಾಕ್ಷವಿಲ್ಲವಾಗಿತ್ತು. ಅಲ್ಲಿಗೆ ಯಾರು ಹಣ ಕೊಡುತ್ತಾರೆ? ಬೆಂಗಳೂರು ಅಥವಾ ಹೈದರಾಬಾದಿನವರು ಕೊಡಬೇಕೇ? ನೋಡು